KAUK710003322019

## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಕುಮಟಾ

**ಉಪಸ್ಥಿತರು**

**ಶ್ರೀಮತಿ ವರ್ಷ ಶ್ರೀ,**

**ಬಿ.ಎ.(ಎಲ್), ಎಲ್.ಎಲ್.ಬಿ.,**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಕುಮಟಾ

## ಮೂಲಾ ದಾವಾ ಸಂಖ್ಯೆ : 58/2016

## ದಿನಾಂಕಃ 14 ನೇ ನವಂಬರ್ 2024

| | |
|---|---|
| **ವಾದಿಯರುಃ** | ಮಂಜುನಾಥ ಗೋಪಾಲಕೃಷ್ಣ ಭಟ್ಟ,<br>**(ವಾದಿಯರ ಪರ ಶ್ರೀ ಎನ್ ಕೆ ಎಸ್ ವಕೀಲರು)** |

ವಿರುದ್ಧ

| | |
|---|---|
| **ಪ್ರತಿವಾದಿಯರುಃ** | 1. ಪ್ರಕಾಶ ಪರಮಯ್ಯ ನಾಯ್ಕ ಮತ್ತು ಇತರರು<br>**(ಪ್ರತಿವಾದಿಯರ ಪರ ಶ್ರೀ ಎಸ್.ವಿ.ಎ ವಕೀಲರು)** |

## ***ಮಧ್ಯಾಂತರ ಅರ್ಜಿ ಸಂಖ್ಯೆ – XII***

| | |
|---|---|
| **ಅರ್ಜಿದಾರರುಃ** | 1. ಮಂಜುನಾಥ ಗೋಪಾಲಕೃಷ್ಣ ಭಟ್ಟ, ,<br>**----- ವಾದಿಯರು** |

ವಿರುದ್ಧ

| | |
|---|---|
| **ಎದುರುದಾರರುಃ** | 1. ಪ್ರಕಾಶ ಪರಮಯ್ಯ ನಾಯ್ಕ ಮತ್ತು ಇತರರು,<br>**------ ಪ್ರತಿವಾದಿಯರು** |

| | | |
|---|---|---|
| 1. | ಅರ್ಜಿಯನ್ನು ಸಲ್ಲಿಸುವ ನಿಬಂಧನೆ | ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 6 ನಿಯಮ 17 ಮತ್ತು ಸಹವಾಚಕ 151 ರಡಿಯಲ್ಲಿ ಸಲ್ಲಿಸಿದ ಅರ್ಜಿ. |
| 2. | ಕೋರಲಾದ ಪರಿಹಾರ | ಸರಸ ನಿರಸ ವಾಂಟಣಿ |
| 3. | ಅರ್ಜಿಯನ್ನು ಸಲ್ಲಿಸಿದ ದಿನಾಂಕ | ದಿ. 18.06.2024 |
| 4. | ಅರ್ಜಿಯ ಸಂಖ್ಯೆ | XII |
| 5. | ಅಕ್ಷೇಪಣೆಯನ್ನು ಸಲ್ಲಿಸಿದ ದಿನಾಂಕ | ದಿ. 18.05.2024 |
| 6. | ಆದೇಶದ ದಿನಾಂಕ | ದಿ.14.11.2024 |

**ಅರ್ಜಿದಾರರು / 1 ರಿಂದ 3ನೇ ಪ್ರತಿವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 6 ನಿಯಮ 17 ಸಹವಾಚಕ 151 ರಡಿಯಲ್ಲಿ ಸಲ್ಲಿಸಿದ ಮಧ್ಯಾಂತರ ಅರ್ಜಿ ಸಂಖ್ಯೆ - *XII*ರ ಮೇಲಿನ ಆದೇಶ**

ಅರ್ಜಿದಾರರು / ವಾದಿಯರು ಈ ಮಧ್ಯಾಂತರ ಅರ್ಜಿಯನ್ನು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ **6** ನಿಯಮ **17** ಸಹವಾಚಕ **151** ರಡಿಯಲ್ಲಿ ದಾಖಲು ಮಾಡಿರುತ್ತಾರೆ. ಅವರು ಕೋರಿಕೊಳ್ಳುವುದೇನೆಂದರೆ, ಅರ್ಜಿದಾರರು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ, ಪ್ರಸ್ತಾವಿತ ತಿದ್ದುಪಡಿಯನ್ನು ತಮ್ಮ ವಾದ ಪತ್ರಕ್ಕೆ ಸೇರ್ಪಡಿಸಿಕೊಳ್ಳುವ ಸಲುವಾಗಿ ತಿದ್ದುಪಡಿ ಮಾಡುವ ಪ್ರಾರ್ಥನೆಯೊಂದಿಗೆ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**02. ಪ್ರಸ್ತಾವಿತ ತಿದ್ದುಪಡಿ ವಿವರ**

**1. ವಾದ ಪತತ್ರ ಪುಟ್ಟ ಸಂಖ್ಯೆ 2 ರಲ್ಲಿ ಪ್ಯಾರಾ 2ರ ನಂತರ 2 (ಅ) ಎಂದು ಈ ಕೆಳಗಿನ ಸಂಗತಿಗಳನ್ನು ಸೇರಿಸಬೇಕಾಗಿ ಕೇಳಿಕೊಂಡಿರುತ್ತಾರೆ.**

"**2ಎ**. ಈ ದಾವಾ ದಾಖಲ್ಪಡಿಸಿದ ನಂತರ ವಾದಿಯ ಸಾಕ್ಷ್ಯ ವಿಚಾರಣೆ ಮುಗಿದ ನಂತರ ವಾದಿಯ ಪರವಾಗಿ ಮಧ್ಯಂತರ ಅರ್ಜಿ ನಂ.8 ನೇದನ್ನು ಸಲ್ಲಿಸಿ ವಾದಿಯ ಹಕ್ಕಿನ ದಾವಾ ಸ್ಥಳ ಮತ್ತು

ಪ್ರತಿವಾದಿಯರ ಹಕ್ಕಿನ ಸ್ಥಳವನಉನಅ ಅಳತೆ ಮಾ ಡಿಮಾಡಿ ನಿರ್ಧಿಷ್ಟಪಡಿಸಿ ನಕ್ಷೆ ತಾಯಾರಿಸಿ ಅಳತೆ ಕಾಲದಲ್ಲಿ ಪ್ರತಿವಾದಿಯರು ದಾವಾ ಸ್ಥಳವನ್ನು ಅತಿಕ್ರಮಿಸಿದ್ದು ಕಂಡುಬಂದ್ಲಿ ಅತೀಕ್ರಮಣದ ಕ್ಷೇತ್ರವನ್ನು ಅಳತೆಯಿಂದ ನಿರ್ಧಿ ಷ್ಟಪಡಿಸಿ ವರದಿಯ ಮಾಡುವಂತೆ ಭೂದಾಖೆಗಳ ಸಹಾಯಕ ನಿರ್ದೇಶಕರು ಕುಮಟಾ ಇವರ ಅಧೀನ ಸರ್ವೆಯರನ್ನು ಕಮೀಷನರ್ ಎಂದು ನೇಮಣೂರು ಮಾಡುವಂತೆ ಕೇಳಿದಂತೆ ಮಾನ್ಯ ನ್ಯಾಯಾಲಯದವರು ಸದರಿ ಅರ್ಜಿಯನ್ನು ಪುರಸ್ಕರಿಸಿದರು, ನಂತರ ಮಾನ್ಯ ನ್ಯಾಯಾಲಯದ ಆದೇಶದಂತೆ ತಾಲೂಕ ಭೂಮಾಪಕರಾದ ಅಶೋಕ ರಂಗಾರೆಡ್ಡಿ ಇವರು ವಾದಿ ಪ್ರತಿವಾದಿಯರಿಗೆ ನೋಟೀಸ್ ನೀಡಿ ದಾವಾ ಸ್ಥಳ ಮತ್ತು ಪ್ರತಿವಾದಿಯರ ಸ್ಥಳವನ್ನು ದಿಃ21-04-202023 ಹಾಗೂ 02-06-2023 ರಂದು ವಾದಿ ಮತ್ತು ಪ್ರತಿವಾದಿಯರ ಸಮಕ್ಷಮ ಅಳತೆ ಮಾಡಿ ನಕ್ಷಯ ತಯಾರಿಸಿ ಸದರಿ ನಕ್ಷೆಯಲ್ಲಿ ಪ್ರತಿವಾದಿಯರು ವಾದಿಯ ಹಕ್ಕಿನ ದಾವಾ ಸ್ಥಳದಲ್ಲಿ 0-5-02 ಸ್ಥಳದಲ್ಲಿ ಅತಿಕ್ರಮಿಸಿದ ಕುರಿತು ಮತ್ತು ಪ್ರತಿವಾದಿಯರು ನಿರ್ಮಿಸಿದ ಎರಡು ವಾಸ್ತವ್ಯದ ಮನೆಯನ್ನು ಕೂಡಾ ದಾವಾ ಸ್ಥಳವನ್ನು ಅತಿಕ್ರಮಿಸಿ ನಿರ್ಮಿಸಿದ ಕುರಿತು ವಿವರವಾದ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಇರುತ್ತದೆ"

**2** ವಾದಪತ್ರ ಸಂಖ್ಯೆ 3 ರಲ್ಲಿ ಪ್ಯಾರಾ 6 ರ ನಂತರ ಮಾರಣಿ ಪ್ಯಾರಾ 'ಅ' ಮಾಗಣಿಯ 2ನೇ ಸಾಲಿನಲ್ಲಿ "ದಾವಾ ಲಗ್ತ ಹಾತ ನಕ್ಷೆಯಲಕ್ಲಿ ಕಾಣಿಸಿದ ಕುಮಟಾ ತಾಲೂಕು ಹಂದಿಗೋಣ ಗ್ರಾಮದ ಸ.ನಂ.187 ಹಿಸ್ಸಾ 2 ಕ್ಷೇತ್ರ 0-7-12 ನೇಗೋಪ್ಪಿದ ಸ್ಥಳದಲ್ಲಿನ ಸರ್ವೆ ಗಡಿಯಂಚಿನಿಂದ ಉತ್ತರ ದಿಕ್ಕಿನಲ್ಲಿ ಪೂರ್ವ ಪಶ್ಚಿಮವಾಗಿ ಪ್ರತಿವಾದಿಯರು ಅತಿಕ್ರಮಿಸಿದ 0-2-0 ಸ್ಥಳದ" ಎಂಬುದನ್ನು ಕಾಟುಹಾಕಿ ಅದರ ಬದಲು ಮಾನ್ಯ ನ್ಯಾಯಾಲಯದ ಆದೇಶದಂತೆ ನೇಮಣೂಕಾದ ತಾಲೂಕ ಭೂಮಾಕಪಕರು ವಾದಿಯ ಹಕ್ಕಿನ ದಾವಾಸ್ಥಳ ಮತ್ತು ಪ್ರತಿವಾದಿಯ ಹಕ್ಕಿನ ಸ್ಥಳವನ್ನು ಅಳತೆ ಮಾಡಿ ತಯಾರಿಸಿದ ನಕ್ಷೆಯಲ್ಲಿ ನೀಲಿ ಬಣ್ಣದಿಂದ ಕಾಣಿಸಿದ ವಾದಿಯ ಹಕ್ಕಿನ ಸ.ನಂ.187/2 ರಲ್ಲಿ ಪ್ರತಿವಾದಿಯರು ಅತಿಕ್ರಮಿಸಿದ 0-4-2 ಸ್ಥಳವನ್ನು ಮತ್ತು ಗುಲಾಬಿ ಬಣ್ಣದಿಂದ ಕಾಣಿಸಿದ 07-0 ಸ್ಥಳವನ್ನು ಒಟ್ಟೂ ಸೇರಿ 0-80-2 ಸ್ಥಳದ" ಎಂತಾ ಸೇರಿಸಬೇಕು.

**3.** ವಾದಪತ್ರದ ಪುಟ ಸಂಖ್ಯೆ 3 ರಲ್ಲಿ ಪ್ಯಾರಾ 6 ರ ನಂತರ ಮಾಗಣಿ ಪ್ಯಾರಾ 'ಅ' ಮಾಗಣಿಯ ನಂತರ 'ಬ' ಎಂತಾ ಈ ಕೆಗಿನ ಮಾಗಣಿಯನ್ನು ಸೇರಿಸಬೇಕು.

**"(ಬ)"** ಮಾನ್ಯ ನ್ಯಾಯಾಲದ ಆದೇಶದಂತ ನೆಮಣೂಕಾದ ತಾಲೂಕ ಭೂಮಾಪಕರ ವಾದಿಯ ಹಕ್ಕಿನ ದಾವಾ ಸ್ಥಳ ಸ.ನಂ.187//2 ಮತ್ತು ಪ್ರತಿವಾದಿಯ ಹಕ್ಕಿನ ಸ.ನಂ.187/3ಅ ಸ್ಥ್ಳವನ್ನು ಅಳತೆ ಮಾಡಿ ತಯಾರಿಸಿದ ನಕ್ಷೆಯಲ್ಲಿ H.I.J.K,' ಅಂತಾ ಲಾಬಿ ಬಣ್ಣದಿಂದ ಕಾರಣಸಿದ ಪ್ರತಿವಾದಿಯರು ವಾದಿಯ ಹಕ್ಕಿನ ದಾವಾ ಸ್ಥ್ಳದಲ್ಲಿ 0-0-4 ಸ್ಥಳವನ್ನು ಅತಿಕ್ರಮಿಸಿ ಕಟ್ಟಿಸಿದ 10.00 ಫೂಟ್ ಉದ್ದ ಮತ್ತು 2.40 ಅಗಲದ ಪ್ರತಿವಾದಿಯರ ವಾಸ್ತವ್ಯದ ಮನೆಯ ಭಾಗವನ್ನು ಕಿತ್ತು ಖುಲ್ಲಪಡಿಸುವಂತೆಯೂ ಮತ್ತು ಸದರಿ ನಕ್ಷೆಯಲ್ಲಿ N.O.P.Q ಎಂದು ಗುಲಾಬಿ ಬಣ್ಣದಿಂದ ಕಾಣಿಸಿದ ಪ್ರತಿವಾದಿಯರು ವಾದಿಯ ಹಕ್ಕಿನ ದಾವಾ ಸ್ಥಳದಲ್ಲಿ 0-0-2 ಸ್ಥಳವನ್ನು ಅತಿಕ್ರಮಿಸಿ ಕಟ್ಟಿಸಿದ 9.00 ಫೂಟ್ ಉದ್ದ ಮತ್ತು 1.50 ಫೂಟ್ ಅಗಲದ ಪ್ರತಿವಾದಿಯರ ವಾಸ್ತವ್ಯದ ಮನೆಯ ಭಾಗವನ್ನು ಕಿತ್ತು ಖುಲ್ಲಾಪಡಿಸುವಂತೆಯೂ ಪರತಿವಾದಿಯರ ವಿರುದ್ಧ ಡಿಕ್ರಿ ಮಾಡಬೇಕಾಗಿ ಬೇಡಿಕೆ ಅದೆ. ಒಂದೊಮ್ಮ ಪ್ರತಿವಾದಿಯರು ಮಾನ್ಯ ನ್ಯಾಯಾಲದ ಆದೇಶದಂತೆ ಸದರಿ ವಾಸ್ಯವ್ಯದ ಇಮಾರತಿನ ಅತಿಕ್ರಮಿಸಿದ ಭಾಗನಮ್ನ ಕಿತ್ತು ಖಲ್ಲಾಪಡಿಸಿ ಬರದಿದ್ದಲ್ಲಿ ಮಾನ್ಯ ನ್ಯಾಯಾಲಯ ಸಹಾಯದಿಂದ ಪ್ರತಿವಾದಿಯರು ದಾವಾ ಸ್ಥಳವನ್ನು ಅತಿಕ್ರಮಿಸಿ ಕಟ್ಟಿದ ಸದರಿ ವಾಸ್ತವ್ಯದ ಇಮಾರತಿನ ಭಾಗವನ್ನು ಕಿತ್ತು ಖುಲ್ಲಾ ಪಡಿಸುವಂತೆ ಆದೇಶ ಮಾಡಬೇಕಾಗಿಯೂ ಮತ್ತು ಆ ಬಗ್ಗೆ ತಗಲತಕ್ಕ ಖರ್ಚನ್ನು ಪ್ರತಿವಾದಿಯರಿಂದ ವಾದಿಗೆ ವಸೂಲು ಕೊಡಿಸುವಂತೆ ಅಜ್ಞಾಪಿತ ಡಿಕ್ರಿ ಪರಿಣಾಮ ನೀಡಬೆಕಾಗಿ ಬೇಡಿಕೆ ಅದೆ. ಈ ಬಗ್ಗೆ ಕರ್ನಾಟಕ ಕೋರ್ಟ ಫ್ರೀ ಮತ್ತು ಸ್ಯೂಟ್ ವೆಲ್ಯೂಯೇಶನ್ ಕಾನೂನಿನನ್ವಯ ಕೋರ್ಟ ಫೀ ಮಾನ್ಯ ನ್ಯಾಯಾಲಯಕ್ಕೆ ಜಮಾ ಮಾಡಲು ವಾದಿಯು ತಯಾರಿದ್ದಾನೆ",

**4.** ಮಾಗಣಿ ಪ್ಯಾರಾದಲ್ಲಿ '(ಅ)(ಇ)(ಎಫ್) ಎಂತಾ ಇರುವುದನ್ನು (ಕ)(ಡ)(ಇ) ಎಂತಾ ತಿದ್ದುಪಡಿ ಮಾಡಬೇಕು'.

**5.** ವಾದಪತ್ರದ ಪುಟ ಸಂಖ್ಯೆ 3 ರಲ್ಲಿ ಮಾಗಣಿ ಪ್ಯಾರಾದ ನಂತರ ದಾವಾ ಅಸ್ತಿಯ ವಿವರದ ನಂತರ 2ನೇ ಸಾಲಿನಲ್ಲಿ "ಸರ್ವೆ ಗಡಿಯಂಚಿನಿಂದ ಉತ್ತರ ದಿಕ್ಕಿನಲ್ಲಿ ಪೂರ್ವ ಪಶ್ಚಿಮವಾಗಿ ಪ್ರತಿವಾದಿಯರು ಅತಿಕ್ರಮಿಸಿದ 0-2-0 ಸ್ಥಳ" ಎಂತಾ ಇರುವುದನ್ನು ಕಾಟು ಹಾಕಿ ಮಾನ್ಯ ನ್ಯಾಯಾಲಯದ ಆದೇಶದಂತೆ ತಾಲೂಕಾ ಭೂಮಾಪಕರು ತಯೂರಿಸಿದ ನಕ್ಷೆಯಲ್ಲಿ ನಿಲ್ಲಿ ಬಣ್ಣದಿಂದ ಕಾಣಿಸಿದ ಪ್ರತಿವಾದಿಯು ದಾವಾ ಸ್ಥಳದ ಸ.ನಂ.187/2 ರಲ್ಲಿ ಅತಿಕ್ರಮಿಸಿದ 0-4-0 ಸ್ಥಳ ಮತ್ತು ಸದರಿ

ನಕ್ಷೆಯಲ್ಲಿ ಗುಲಾಬಿ ಬಣ್ಣದಿಂದ ಕಾಣಿಸಿದ 0-1-0 ಸ್ಥಳ ಹೀಗೆ ಪ್ರತಿವಾದಿಯರು ದಾವಾ ಸ್ಥ ಸ.ನಂ.187/2 ರಲ್ಲಿ ಅತಿಕ್ರಮಿಸಿದ ಸ್ಥಳ ಒಟ್ಟೂ ಸೇರಿ 0-8-2 ಸ್ಥಳ, ಹಾಗೂ ಸದರಿ ನಕ್ಷೆಯಲ್ಲಿ 'H.I.J.K ಎಂತಾ ಗುಲಾಬಿ ಬಣ್ಣದಿಂದ ಕಾಣಿಸಿದ ಪ್ರತಿವಾದಿಯರು ವಾದಿಯ ಹಕ್ಕಿನ ದಾವಾ ಸ್ಥಳದಲ್ಲಿ 0-0-4 ಸ್ಥಳವನ್ನು ಅತಿಕ್ರಮಿಸಿ ಕಟ್ಟಿಸಿದ 10.00 ಫೂಟ್ ಉದ್ದ ಮತ್ತು 2.40 ಅಗಲದ ಪ್ರತಿವಾದಿಯರ ವಾಸ್ತವ್ಯದ ಮನೆಯ ಭಾಗ ಮತ್ತು ಸದರಿ ನಕ್ಷೆಯಲ್ಲಿ 'N.O.P.Q' ಎಂದು ಗುಲಬಿ ಬಣ್ಣದಿಂದ ಕಾಣಿಸಿದ ಪ್ರತಿವಾದಿಯರು ವಾದಿಯ ಹಕ್ಕಿನ ದಾವಾ ಸ್ಥಳದಲ್ಲಿ 0-0-2 ಸ್ಥಳವನ್ನು ಅತಿಕ್ರಮಿಸಿ ಕಟ್ಟಿಸಿದ 9.00 ಫೂಟ್ ಉದ್ದ ಮತ್ತು 1.30 ಅಗಲದ ಪ್ರತಿವಾದಿಯರ ವಾಸ್ತವ್ಯದ ಮನೆಯ ಭಾಗ".

ಸದರಿ ಈ ಮೇಲೆ ನಮೂದಿಸಿರುವ ವಿಷಯಗಳು ಈ ದಾವೆಯಲ್ಲಿ ಕಮೀಷನರನ್ನು ನೇಮಕ ಮಾಡಿದ ನಂತರ ಈ ಸಂಗತಿಗಳು ವಾದಿಗೆ ತಿಳಿದು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ.

**03. ಅರ್ಜಿದಾರರ / ವಾದಿಯವರು ಪ್ರಮಾಣ ಪತ್ರಿಕೆ ಪ್ರಮುಖ ಅಂಶಗಳು**

ಅರ್ಜಿದಾರರು ತಮ್ಮ ಅರ್ಜಿಯೊಂದಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅವರು ಪ್ರಮಾಣಿಕರಿಸುವುದೇನೆಂದರೆ, ಈ ದಾವ ಸ್ಥಳ ಹಂದಿಗೊಣ ಗ್ರಾಮದ ಸರ್ವೆ ನಂ **157/2** ನ್ನು ಹದುಬಸ್ತು ಅಳತೆಮಾಡಿ ನೋಡಿದಾಗ ಪ್ರತಿವಾದಿಯರು ತನ್ನ ಹಕ್ಕಿನ **0-02-0** ಸ್ಥಳಗಳನ್ನು ಪ್ರತಿವಾದಿಯರು ಅತಿಕ್ರಮಿಸಿರುವುದಾಗಿ ತಯಾರಿಸಿದಂತೆ ತಾನು ಈ ದಾವೆಯನ್ನು ಪ್ರತಿವಾರದಿಯರ ವಿರುದ್ದ ಅತೀಕ್ರಮಣ ಮಾಡಿಕೊಂಡ ಸ್ಥಳದ ಖುಲ್ಲಾ ಖಬ್ಜಾವನ್ನು ನೀಡುವಂತೆ ಹಾಗೂ ನಿರ್ಬಂದಕಾಜ್ಞೆ ದಾಖಲಿಸಿದ್ದು ಇರುತ್ತದೆ. ಈ ದಾವೆಯಲ್ಲಿ ಪ್ರಾಸಾ-**1** ರವರ ಪಾಟೀ ಸವಾಲಿನಲ್ಲಿ ತಾನು ದಾವೆಯಲ್ಲಿ ಅದರಿಸಿದ್ದ ಭೂ ಮಾಪಕರು ದಾವಾ ಸ್ಥಳವನ್ನು ಅಳತೆ ಮಾಡಿ ತಯಾರಿಸಿದ ಹದ್ದುಬಸ್ತು ಸರ್ವೆಗೆ ಪ್ರತಿವಾದಿಯು ಅಕ್ಷೇಪಣೆಯನ್ನು ಸಲ್ಲಿಸಿರುವುದಾಗಿ ಸದರಿ ಅಕ್ಷೇಪಣೆಯನ್ನು ನಿಶಾಣೆಕೊಂಡಿರುದಿರುತ್ತದೆ. ಅದರಂತೆ ತಾನು ತನ್ನ ಹಕ್ಕಿನ ದಾವಾ ಸ್ಥಳವನ್ನು ಓತ್ತುವರಿ ಜಾಗವನ್ನು ಕಾನೂನುನಂತೆ ರುಜುವಾತುಪಡಿಸಲು ದಿಃ**17-02-2020** ರಂದು ಮಧ್ಯಾಂತರ ಅರ್ಜಿ **8** ನ್ನು ಸಲ್ಲಿಸಿದ್ದು ಸದರಿ ಅರ್ಜಿಯಂತೆ ನ್ಯಾಯಾಲಯದ ಆಯುಕ್ತರನ್ನು ನೇಮಿಸಿ ಅವರು ದಾವಾ ಸ್ಥಳವನ್ನು ಅಳತೆ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಪ್ರತಿವಾದಿಯರು **0-05-02** ಸ್ಥಳವನ್ನು

ಅತೀಕ್ರಮಿಸಿರುವುದಾಗಿ ತೋರಿಸಿರುತ್ತಾರೆ ಹಾಗೂ ಪ್ರತಿವಾದಿಯರು ನಿರ್ಮಿಸಿರುವ ಎರಡು ಇಮಾರತುಗಳು ಕೂಡ ತನ್ನ ಹಕ್ಕಿನ ಸ್ಥಳವನ್ನು ಅತೀಕ್ರಮಿಸಿ ನಿರ್ಮಿಸಿರುವುದಾಗಿ ಸದರಿ ವರದಿಯಿಂದ ತಿಳಿದುಬಂದಿರುತ್ತದೆ. ಅದರಂತೆ ಪ್ರತಿವಾದಿಯರು ತನ್ನ ಹಕ್ಕಿನ ದಾವಾ ಸ್ಥಳವನ್ನು ಅತೀಕ್ರಮಿಸಿದ ಭಾಗದ ಖುಲ್ಲಾ ಖಬ್ಜಾವನ್ನು ತನ್ನ ತಾಬಾ ವಹಿಸಿಕೊಡುವಂತೆ ಕೇಳಿಕೊಂಡಿದ್ದು, ಅದರಂತೆ ಈ ಅರ್ಜಿಯನ್ನು ದಾಖಲಿಸಿಸರುವುದಾಗಿ ಹೇಳಿರುತ್ತಾರೆ. ಪ್ರಸ್ತಾವಿತ ತಿದ್ದುಪಡಿಯು ಈ ದಾವೆಯಲ್ಲಿ ಅವಶ್ಯವಾಗಿರುವುದರಿಂದ ಈ ಅರ್ಜಿಯನ್ನು ಪುರಸ್ಕಾರ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

**04.** ಎದುರುದಾರರು ಪರ ವಕೀಲರು ದಿ.18.06.2024 ರಂದು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಅರ್ಜಿಯ ನ್ಯಾಯೋಚಿತ ಇತ್ಯರ್ಥಕ್ಕಾಗಿ ಪರಿಗಣಿಸುವ ಪ್ರಮುಖ ಪ್ರತಿರೋಧಗಳೇನೆಂದರೆ, ಹಾಲಿ ಅರ್ಜಿಯನ್ನು ಕಾಲ ವಿಳಂಬದಿಂದ ಕೂಡಿದ್ದು, ಸದರಿ ಕಮೀಷನರ್ ಅರ್ಜಿಯಲ್ಲಿ ವಾದಿಯು ಎಷ್ಟು ಕ್ಷೇತ್ರದ ಖಬ್ಜಾ ವಹಿವಾಟಿನಲ್ಲಿ ಇದ್ದಾರೆ ಹಾಗೂ ಅವರ ಬಾಬ್ತು ಸರ್ವೆ ನಂ.187/02 ರಲ್ಲಿ ಎಷ್ಟು ಕ್ಷೇತ್ರವನ್ನು ಅತೀಕ್ರಮಸಿದ್ದಾನೆ ಎಂದು ತೋರಿಸಲು ಕೇವಲ ವಹಿವಾಟಿಹ ಸರ್ವೆಗಳಿಗಿಂತ ಹೆಚ್ಚು ತೋರಿಸಿದೆ ಎಂದು ಹೇಳಿರುತ್ತಾರೆ. ವಾದಿಯ ದಾವೆಯ ಕಾರಣ ಮತ್ತು ತಿದ್ದುಪಡಿಯ ಕೇಳಿದಾಗ ಸರ್ವೆ ಇಲಾಖೆಯ ಕಮೀಷನ್ ವರದಿಯಂತೆ ದಾವಾ ಕಾರಣವು ಬೇರೆ ಬೇರೆಯಾಗುತ್ತದೆ. ಅದಲದ್ದೇ ಕಮೀಷನರ್ ಸುಳ್ಳು ವರದಿಯನ್ನು ಹೇಳಿರುತ್ತಾರೆ. ದಾವಾ ತಿದ್ದುಪಡಿ ಸಂಬಂಧಪಟ್ಟ ಕಾನೂನಿನ ಅಂಶವು ಸ್ವಷ್ಟವಾಗಿದೆ (Inspite of due diligence matter could be brought to the notice at the time of filing the suit) ಈ ಬಗ್ಗೆ ಪ್ರತಿವದಿಯ ಪರ ಅರ್ಜಿಯ ವಿಚಾರಣಾ ಕಾರಣದಲ್ಲಿ ಹೆಚ್ಚಿನ ವಿಷಯವನ್ನು ತಿಳಿಸಲು ಅವಕಾಶ ಕೋರಿದ್ದು ಇದೆ. ಈ ಅರ್ಜಿಯನ್ನು ಕಾಲಹರಣ ಮಾಡಲು ಸಲ್ಲಿಸಿರುವುದಾಗಿ ಈ ಅರ್ಜಿಯನ್ನು ತಿರಸ್ಕರಿಸಬೇಕಾಗಿ ಅವರು ಕೇಳಿಕೊಂಡಿರುತ್ತಾರೆ.

**05.** ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

**06.** ಅರ್ಜಿಯ ನ್ಯಾಯೋಜಿತ ಇತ್ಯರ್ಥಕ್ಕಾಗಿ ನ್ಯಾಯಾಲಯದ ಪರಿಗಣನೆಗೆ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

**ಅಂಶ 1. ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ 11 ನ್ನು ಪುರಸ್ಕರಿಸಲು ಸಕಾರಣವನ್ನು ನೀಡುತ್ತಾರೆಯೇ?**

**ಅಂಶ 2. ಯಾವ ಆದೇಶ?**

**07.** ಅರ್ಜಿದಾರರು ಮತ್ತು ಎದುರುದಾರರ ಪರ ವಕೀಲರ ಅರ್ಜಿಯ ನ್ಯಾಯೋಜಿಕ ಇತ್ಯರ್ಥಕ್ಕಾಗಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿದ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

**ಅಂಶ 1 : ಸಕರಾತ್ಮಕವಾಗಿ**

**ಅಂಶ 2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಂದಾಗಿ**

## ಕಾರಣಗಳು

**08.** **ಅಂಶ 1:** ಈ ಹಂತದಲ್ಲಿ ಅರ್ಜಿಯ ನ್ಯಾಯೋಚಿತ ನಿರ್ವಹಣೆಗಾಗಿ ದಿವಾಣಿ ಪ್ರಕ್ರಿಯಾ ಸಂಹಿತೆ **ಕ್ರಮಾದೇಶ 6 ನಿಯಮ 17 ರ ಉಪಬಂಧವನ್ನು** ಚರ್ಚಿಸುವುದು ಪ್ರಮುಖ ಸಂಗತಿಯಾಗಿದೆ.

**ಕ್ರಮಾದೇಶ 6 ನಿಯಮ 17 ವಾದ ಪ್ರತಿವಾದ ಪತ್ರಗಳ ತಿದ್ದುಪಡಿ**

ನ್ಯಾಯೋಚಿತವಾಗಬಹುದಾದಂತಹ ರೀತಿಯಲ್ಲಿ ಮತ್ತು ಅಂಥ ನಿಬಂಧನೆಗಳ ಮೇಲೆ ಯಾವನೇ ಪಕ್ಷಕಾರನ ವಾದ ಪ್ರತಿವಾದ ಪತ್ರವನ್ನು ಬದಲಾಯಿಸಲು ಅಥವಾ ತಿದ್ದುಪಡಿ ಮಾಡಲು ವ್ಯವಹರಣೆಯ ಯಾವುದೇ ಹಂತದಲ್ಲಿ ನ್ಯಾಯಾಲಯವು ಅವನಿಗೆ ಅವಕಾಶ ಕೊಡಬಹುದು ಮತ್ತು ಪಕ್ಷಗಾರರ ನಡುವೆ ವಾದ ಪತ್ರದಲ್ಲಿರುವ ನಿಜವಾದ ಪತ್ರಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಂತಹ ಎಲ್ಲಾ ತಿದ್ದುಪಡಿಯನ್ನು ಮಾಡಬಹುದು. ಪರಂತು ಅಧಿವಿಚಾರಣೆ ಪ್ರಾರಂಭವಾದ ನಂತರ ಯುಕ್ತ ಎಚ್ಚರಿಕೆ ವಹಿಸಿದಾಗ್ಯೂ ಅಧಿವಿಚಾರಣೆ ಪ್ರಾರಂಭಕ್ಕೆ ಪೂರ್ವದಲ್ಲಿ ಪಕ್ಷಗಾರರು ಆ ವಿಷಯವನ್ನು ವಾದಿಸುವುದು ಆಗುತ್ತಿರಲಿಲ್ಲ ಎಂಬ ನಿರ್ಣಯಕ್ಕೆ

ನ್ಯಾಯಾಲಯವು ಬರದ ಹೊರತು ತಿದ್ದುಪಡಿಯ ಯಾವುದೇ ಅರ್ಜಿಯನ್ನು ಅನುಮತಿಸಕ್ಕದಲ್ಲ.

**09.** ಈ ಮೇಲಿನ ನಿಯಮ ಹಾಗೂ ಪರಂತುಕದ ಮತ್ತು ರೂಢಿಗತ ನಿಯಮಗಳ ಅಶಾಯದಂತೆ ಮಾನ್ಯಸರ್ವೋಚ್ಚ ನ್ಯಾಯಾಲಯವು ದಿವಾಣಿ ಪ್ರಕ್ರಿಯ ಸಂಹಿತೆ ಕ್ರಮಾದೇಶ 6 ನಿಯಮರ 17ರ ಅರ್ಜಿಯ ನ್ಯಾಯಾನಿರ್ವಹಣೆಗೆ ಸಂಬಂಧಿಸಿದಂತೆ ಈ ಕೆಳಗೆ ನಮೂದಿಸಿದ ನೂತನಾ ತೀರ್ಪು ಆದ "**LIFE INSURANCE CORPORATION OF INDIA V/S BUILDERS PRIVATE LIMITED AND ANOTHER”** ರಲ್ಲಿ ಮಾರ್ಗ ಸೂಚಿಗಳನ್ನು ನೀಡಿದ್ದು, ಅವುಗಳನ್ನು ಹಾಲಿ ನ್ಯಾಯಾಲಯವು ವಿನಮ್ರತೆಯಿಂದ ಅಧಾರಿಸಿದ್ದು ಸದರಿ ಮಾರ್ಗ ಸೂಚಿಗಳು ಈ ಕೆಳಕಂಡತೆ ಇದೆ.

**ಕಂಡಿಕೆ 70:-**

***(ii) All amendments are to be allowed which are necessary for determining the real question in controversy provided it does not cause in justice of prejudice to other side. This is mandatory, as is apparent from the use of the word “Shall”, in the latter part of order VI Rule 17 of CPC.***

***(iii) the prayer for amendments is to allowed:-***

***I) If the amendments is required for effective and proper adjucation of controversy between the parties and***

***ii) to avoid multiplicity of proceedings, provided***

***a). The amendments does not result in injustice to the other side.***

***b). By the amendments, the parties seeking the amendment does not seek to withdraw any clear admission made by the party which confers a right on the other side and***

***c) the amendment does not raise a time barred claim, resulting in divesting of the other side of valuable accured right (in certain situations).***

***iv) the prayer of amendment generally required to be allowed unless:-***

***a) by the amendment, a time barred claim he sought introduced, in which case the part that, the claim would be time barred becomes a relevant factor for consideration.***

***b) the amendment changes the nature of suit.***

***c) the prayer is malafide, or***

***d) by the amendment, the other side looses a valid defence,***

***V) in dealing with the prayer of amendment of pleadings, the court should avoid the hyper-techinical approach and is ordinarily required to be liberal especially where opposite party can be compensated by costs.***

***VI) Where the would be enable the court to pin-pointedly considered the dispute and would aid in rendering more satisfactory decision the prayer for amendment should be allowed.***

***VII) Where the amendment merely sought to introduce and additional or new approach without introducing a time barred cause of action, the amendment is liable to be allowed even after the expiry of limitation.***

***VII) amendment may be justifiably allowed. Where it is intended to rectify of absence of material particulars in the plaint.***

***IX) delay in applying for amendment alone is not a ground to disallow the prayer. Where the aspect of delay is arguable, the prayer to amendment could be allowed as a result of admission by the party seeking amendment, the amendment required to be allowed. Equally where the amendment is necessary for the court to effectively ajducate on the main issues in controversy between the parties, the amendment should be allowed. (See Vijay Gupta Gagninder Kr Ghandi and Others 2022 SCC online DEL 1897)***

**10.** ಈ ಮೇಲಿನ ಸೈದ್ಧಾಂತಿಕ ತತ್ವಗಳನ್ನು ಅನುಸರಿಸುತ್ತ ಪ್ರಸ್ತುತ ದಾವೆಯನ್ನು ವಾದಿಯರು ಪ್ರತಿವಾದಿಯರು ವಿರುದ್ದ ಖಬ್ಜಾ ಹಾಗೂ ನಿರ್ಬಂದಾಕಾಜ್ಞೆ ಪರಿಹಾರಕ್ಕಾಗಿ ಹೂಡಿರುವುದರಿಂದ ವಾದಿಯು ಕೇಳಿಕೊಂಡಂತೆ ಸರ್ವೆ ನಂ 187/2 ರಲ್ಲಿ ಅತೀಕ್ರಮಿಸಿದ ಒಟ್ಟು ಸ್ಥಳ 0-05-02 ಎಂದು ವಾದ ಪತ್ರದಲ್ಲಿ ನಿವೇದಿಸಿಕೊಳ್ಳುವುದರಿಂದ ವ್ಯಾಜ್ಯಗಳ ಪುನರ್ಾರವರ್ತನೆಯನ್ನು ತಡೆ ಹಿಡಿಯುವುದು ಈ ಮೇಲ್ಕಂಡ ಪೂರ್ಣ ನಿರ್ಣಯದ ಅಶಯವಾಗಿದೆ ಹಾಗೂ ಈ ನ್ಯಾಯಾಲಯವು ಸದರಿ ವರದಿಯನ್ನು ಪಶೀಲಿಸಿದ್ದು ಅದರಂತೆ ಈ ಪ್ರಸ್ತಾವಿತ ತಿದ್ದುಪಡಿಯನ್ನು ಮಾಡಿದರೆ, ಅದು ದಾವೆಯ ಯಾವುದೇ ಸ್ವರೂಪವನ್ನು ಬದಲಾಯಿಸದೇ ಇರುವುದರಿಂದ ಹಾಗೂ ಪ್ರಸ್ತಾವೀತ ತಿದ್ದುಪಡಿ ಪಕ್ಷಾಗರರರ ನಡುವೆ ಇರುವ ನೈಜ ಕಾನೂನಿನ ಪ್ರಶ್ನೆ ಹಾಗೂ ವಿವಾದಗಳನ್ನು ಬಗೆಹರಿಸಲು ಅಶವ್ಯವಾಗಿರುತ್ತದೆ ಎಂದು ತೀರ್ಮಾನಿಸಿ **ಅಂಶ 1 ಕ್ಕೆ** ನ್ಯಾಯಾಲಯವು **ಸಕರಾತ್ಮಕವಾಗಿ** ಉತ್ತರಿಸಿರುತ್ತದೆ.

**11.** <u>**ಅಂಶ 2:**</u> **ಅಂಶ** 1 ನ್ನು **ಸಕರಾತ್ಮಕವಾಗಿ** ಉತ್ತರಿಸಿರುವುದರಿಂದ ಈ ಕೆಳಕಂಡಂತೆ,

# ಆದೇಶ

ಅರ್ಜಿದಾರರು / 1 ರಿಂದ 3ನೇ ಪ್ರತಿವಾದಿಯು ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ರೂ.500/- ಖರ್ಚು ಸಮೇತ ಪುರಸ್ಕರಿಸಲಾಗಿದೆ.

ಪ್ರತಿವಾದ ಪತ್ರದ ತಿದ್ದುಪಡಿ.

**(ಈ ತೀರ್ಪನ್ನು ಶೀಘ್ರಲಿಪಿಕಾರರಿಗೆ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ನೇರವಾಗಿ ಬೆರಳಚ್ಚು ಮಾಡಿ, ಗಣಕೀಕರಿಸಿ, ಸರಿಪಡಿಸಿ, ದಿನಾಂಕ 14 ನೇ ನವಂಬರ್ 2024 ರಂದು ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಉಚ್ಚರಿಸಲಾಯಿತು)**

**(ಶ್ರೀಮತಿ ವರ್ಷ ಶ್ರೀ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಕುಮಟಾ**

**(ಆದೇಶವನ್ನು ಪ್ರತ್ಯೇಕವಾದ ಆದೇಶದ ಮೂಲಕ ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ)**

## ಆದೇಶ

ಅರ್ಜಿದಾರರು/ 1 ರಿಂದ 3ನೇ ಪ್ರತಿವಾದಿಯು ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ರೂ.500/- ಖರ್ಚು ಸಮೇತ ಪುರಸ್ಕರಿಸಲಾಗಿದೆ.

ಪ್ರತಿವಾದ ಪತ್ರದ ತಿದ್ದುಪಡಿ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**

**ಕುಮಟಾ**

ನಂತರ ವಾದಿಯ ಸಾಕ್ಷ್ಯ ವಿಚಾರಣೆ ಮುಗಿದ ನಂತರ ವಾದಿಯ ಪರವಾಗಿ ಮಧ್ಯಂತರ ಅರ್ಜಿ ನಂ.8 ನೇದನ್ನು ಸಲ್ಲಿಸಿ ವಾದಿಯ ಹಕ್ಕಿನ ದಾವಾ ಸ್ಥಳ ಮತ್ತು ಪ್ರತಿವಾದಿಯರ ಹಕ್ಕಿನ ಸ್ಥಳವನಉನಅ ಅಳತೆ ಮಾ ಡಿಮಾಡಿ ನಿರ್ಧಿಷ್ಟಪಡಿಸಿ ನಕ್ಷೆ ತಾಯಾರಿಸಿ ಅಳತೆ ಕಾಲದಲ್ಲಿ ಪ್ರತಿವಾದಿಯರು ದಾವಾ ಸ್ಥಳವನ್ನು ಅತಿಕ್ರಮಿಸಿದ್ದು ಕಂಡುಬಂದ್ಲಿ ಅತೀಕ್ರಮಣದ ಕ್ಷೇತ್ರವನ್ನು ಅಳತೆಯಿಂದ ನಿರ್ಧಿ ಷ್ಟಪಡಿಸಿ ವರದಿಯ ಮಾಡುವಂತೆ ಭೂದಾಖೆಗಳ ಸಹಾಯಕ ನಿರ್ದೇಶಕರು ಕುಮಟಾ ಇವರ ಅಧೀನ ಸರ್ವೆಯನ್ನು ಕಮೀಷನರ್ ಎಂದು ನೇಮಣೂರು ಮಾಡುವಂತೆ ಕೇಳಿದಂತೆ ಮಾನ್ಯ ನ್ಯಾಯಾಲಯದವರು ಸದರಿ ಅರ್ಜಿಯನ್ನು ಪುರಸ್ಕರಿಸಿದರು, ನಂತರ ಮಾನ್ಯ ನ್ಯಾಯಾಲಯದ ಆದೇಶದಂತೆ ತಾಲೂಕ ಭೂಮಾಪಕರಾದ ಅಶೋಕ ರಂಗಾರೆಡ್ಡಿ ಇವರು ವಾದಿ ಪ್ರತಿವಾದಿಯರಿಗೆ ನೋಟೀಸ್ ನೀಡಿ ದಾವಾ ಸ್ಥಳ ಮತ್ತು ಪ್ರತಿವಾದಿಯರ ಸ್ಥಳವನ್ನು ದಿಃ21-04-2020 ಹಾಗೂ 02-06-2023 ರಂದು ವಾದಿ ಮತ್ತು ಪ್ರತಿವಾದಿಯರ ಸಮಕ್ಷಮ ಅಳತೆ ಮಾಡಿ ನಕ್ಷಯ ತಯಾರಿಸಿ ಸದರಿ ನಕ್ಷೆಯಲ್ಲಿ ಪ್ರತಿವಾದಿಯರು ವಾದಿಯ ಹಕ್ಕಿನ ದಾವಾ ಸ್ಥಳದಲ್ಲಿ 0-5-02 ಸ್ಥಳದಲ್ಲಿ ಅತಿಕ್ರಮಿಸಿದ ಕುರಿತು ಮತ್ತು ಪ್ರತಿವಾದಿಯರು

ನಿರ್ಮಿಸಿದ ಎರಡು ವಾಸ್ತವ್ಯದ ಮನೆಯನ್ನು ಕೂಡಾ ದಾವಾ ಸ್ಥಳವನ್ನು ಅತಿಕ್ರಮಿಸಿ ನಿರ್ಮಿಸಿದ ಕುರಿತು ವಿವರವಾದ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಇರುತ್ತದೆ"